**Kannada**

# White House Fact Sheet

**ಫ್ಯಾಕ್ಟ್ ಶೀಟ್: ಬೈಡೆನ್ ಆಡಳಿತದಿಂದ ಸುರಕ್ಷಿತ, ಹೆಚ್ಚು ಕಠಿಣ ಅಂತಾರಾಷ್ಟ್ರಿಯ ವಿಮಾನಯಾನ ವ್ಯವಸ್ಥೆಯ ಅನುಷ್ಠಾನಕ್ಕೆ ಹೆಚ್ಚುವರಿ ವಿವರ ಬಿಡುಗಡೆ ಮಾಡಿದೆ**

ಅಕ್ಟೋಬರ್ 25, 2021

ಕೋವಿಡ್-19 ರಿಂದ ಜನರನ್ನು ರಕ್ಷಿಸಲು ಪ್ರಯತ್ನ ಮುಂದುವರಿಸುತ್ತಿರುವಾಗ ಬೈಡೆನ್ ಆಡಳಿತವು ಹೊಸ ಅಂತಾರಾಷ್ಟ್ರೀಯ ವಿಮಾನ ಪ್ರಯಾಣ ನೀತಿಯ ಅನುಷ್ಠಾನದ ಹೆಚ್ಚುವರಿ ವಿವರವನ್ನು ಬಿಡುಗಡೆ ಮಾಡಿದ್ದು, ಅಮೇರಿಕಕ್ಕೆ ಪ್ರಯಾಣಿಸುವ ವಿದೇಶಿ ಪ್ರಯಾಣಿಕರು ಪೂರ್ಣ ಲಸಿಕೆ ಪಡೆದಿರಬೇಕಾಗುತ್ತದೆ. ಈ ಪರಿಷ್ಕೃತ ನೀತಿಯು ಅಂತಾರಾಷ್ಟ್ರೀಯ ಪ್ರಯಾಣ ವ್ಯವಸ್ಥೆಯನ್ನು ವಿಶ್ವದಾದ್ಯಂತ ಕಟ್ಟುನಿಟ್ಟಾದ ಮತ್ತು ಸ್ಥಿರ ಸಾರ್ವಜನಿಕ ಆರೋಗ್ಯದ ಮಾರ್ಗದರ್ಶನ ನೀಡುತ್ತದೆ.

ನವೆಂಬರ್ 8ರಿಂದ ಪ್ರಾರಂಭಿಸಿ ಅಮೇರಿಕಕ್ಕೆ ಪ್ರಯಾಣಿಸುವ ನಾಗರಿಕರಲ್ಲದ, ವಲಸಿಗರಲ್ಲದ ವೈಮಾನಿಕ ಪ್ರಯಾಣಿಕರು ಯು.ಎಸ್. ವಿಮಾನ ಹತ್ತುವ ಮುನ್ನ ಪೂರ್ಣ ಲಸಿಕೆ ಪಡೆದಿರಬೇಕು ಮತ್ತು ಕೋವಿಡ್ - 19 ಲಸಿಕೆಯ ಸ್ಥಾನಮಾನ ಕುರಿತು ದೃಢೀಕರಿಸಬೇಕು, ಅದರಲ್ಲಿ ಕೆಲವೇ ವಿನಾಯಿತಿಗಳು ಮಾತ್ರ ಇರುತ್ತವೆ. ಪರಿಷ್ಕೃತ ಪ್ರಯಾಣದ ಮಾರ್ಗಸೂಚಿಗಳಲ್ಲಿ ಪರೀಕ್ಷೆಗೆ ಹೊಸ ನಿಯಮಗಳನ್ನು ಕೂಡಾ ಒಳಗೊಂಡಿರುತ್ತವೆ. ಮತ್ತಷ್ಟು ರಕ್ಷಣೆಗಳನ್ನು ಸದೃಢಗೊಳಿಸಲು, ಲಸಿಕೆ ಪಡೆಯದ ಪ್ರಯಾಣಿಕರು ಯು.ಎಸ್.ನಾಗರಿಕರಾಗಿರಲಿ, ಕಾನೂನುಬದ್ಧ ಶಾಶ್ವತ ನಿವಾಸಿಗಳು(ಎಲ್.ಪಿ.ಆರ್.ಗಳು), ಅಥವಾ ಸಣ್ಣ ಸಂಖ್ಯೆಯ ಲಸಿಕೆ ಪಡೆಯದ ವಿದೇಶಿ ಪೌರರು ಈಗ ನಿರ್ಗಮನದ ಒಂದು ದಿನದ ಒಳಗಡೆ ಪರೀಕ್ಷೆಗೆ ಒಳಪಡಬೇಕು.

ಆಡಳಿತವು ಅನುಷ್ಠಾನ ಕ್ಕೆ ಅಗತ್ಯವಾದ ದಾಖಲೆಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ: 1) ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ ಜಾಗತಿಕ ಪ್ರಯಾಣದ ಸುರಕ್ಷಿತ ಪುನರಾರಂಭಕ್ಕೆ ಅಧ್ಯಕ್ಷರ ಪ್ರಕಟಣೆ;
2) ಲಸಿಕೆ, ಪರೀಕ್ಷೆ ಮತ್ತು ಸಂಪರ್ಕ ಪತ್ತೆ ಮಾಡಲು ಮೂರು ಸೆಂಟರ್ಸ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್(ಸಿಡಿಸಿ) ಆದೇಶಗಳು; ಮತ್ತು 3) ವಿಮಾನಯಾನ ಸಂಸ್ಥೆಗಳು ಮತ್ತು ಅವರ ಪ್ರಯಾಣಿಕರ ಅನುಷ್ಠಾನ ವಿವರಗಳಿಗೆ ತಾಂತ್ರಿಕ ಸೂಚನೆ ಗಳು.

ವಿಜ್ಞಾನ ಮತ್ತು ಸಾರ್ವಜನಿಕ ಆರೋಗ್ಯವನ್ನು ನಮ್ಮ ಮಾರ್ಗಸೂಚಿಯಾಗಿಟ್ಟುಕೊಂಡು ಯುನೈಟೆಡ್ ಸ್ಟೇಟ್ಸ್ ಹೊಸ ಅಂತಾರಾಷ್ಟ್ರೀಯ ವೈಮಾನಿಕ ಪ್ರಯಾಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ್ದು ಅದು ತವರಿನಲ್ಲಿ ಅಮೆರಿಕನ್ನರ ಮತ್ತು ಅಂತಾರಾಷ್ಟ್ರೀಯ ವೈಮಾನಿಕ ಪ್ರಯಾಣದ ಸುರಕ್ಷತೆ ಹೆಚ್ಚಿಸುತ್ತದೆ. ನವೆಂಬರ್ 8 ರಿಂದ ಜಾರಿಯಾಗುವ ಹಿನ್ನೆಲೆಯಲ್ಲಿ ಇಂದು ಹೆಚ್ಚುವರಿ ವಿವರವನ್ನು ಬಿಡುಗಡೆ ಮಾಡಲಾಗಿದ್ದು ವಿಮಾನಯಾನ ಸಂಸ್ಥೆಗಳು ಮತ್ತು ಅಂತಾರಾಷ್ಟ್ರೀಯ ವಿಮಾನ ಪ್ರಯಾಣಿಕರಿಗೆ ಈ ಹೊಸ ನೀತಿಗೆ ಅಗತ್ಯ ತಯಾರಿ ಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ. ಹಿಂದೆ ಪ್ರಕಟಿಸಿದ್ದಂತೆ ನವೆಂಬರ್ 8ರಿಂದ ಪೂರ್ಣ ಲಸಿಕೆ ಪಡೆದ ವಿದೇಶಿ ನಾಗರಿಕರು ಕೂಡಾ ಉತ್ತರದ ಮತ್ತು ನೈಋತ್ಯ ಗಡಿಗಳ ಮೂಲಕ ಪ್ರವಾಸೋದ್ಯಮದಂತಹ ತುರ್ತಲ್ಲದ ಕಾರಣಗಳಿಗೂ ಪ್ರಯಾಣಿಸಲು ಶಕ್ತರಾಗುತ್ತಾರೆ. ಗಡಿಗಳಿಗೆ ಸಂಬಂಧಿಸಿದಂತೆ ತಿದ್ದುಪಡಿಗಳ ಹೆಚ್ಚುವರಿ ವಿವರಗಳು ಮುಂದಿನ ದಿನಗಳಲ್ಲಿ ಲಭ್ಯವಿವೆ.

ಪ್ರಯಾಣಿಕರು ಇಂದಿನ ವಿಮಾನ ಪ್ರಯಾಣದ ಪ್ರಕಟಣೆಯ ಪೂರ್ಣ ವಿವರಗಳನ್ನು ಸಿಡಿಸಿ ಮತ್ತು ಡಿಪಾರ್ಟ್ಮೆಂಟ್ ಆಫ್ ಸ್ಟೇಟ್ ವೆಬ್ಸೈಟ್ ಗಳಲ್ಲಿ ಪಡೆಯಬಹುದು. ಸಾರಾಂಶ ಹೀಗಿದೆ:

**ಪೂರ್ಣ ಲಸಿಕೆ ಪಡೆದ ಸ್ಥಾನಮಾನ:**

- ನವೆಂಬರ್ 8ರಿಂದ ಪ್ರಾರಂಭಿಸಿ ಯುನೈಟೆಡ್ ಸ್ಟೇಟ್ಸ್ ಗೆ ನಾಗರಿಕೇತರ, ವಲಸಿಗೇತರ ವೈಮಾನಿಕ ಪ್ರಯಾಣಿಕರು ಪೂರ್ಣ ಲಸಿಕೆ ಪಡೆದಿರಬೇಕು ಮತ್ತು ಯು.ಎಸ್.ಗೆ ವಿಮಾನ ಹತ್ತುವ ಮುನ್ನ ಲಸಿಕೆ ಪಡೆದ ದಾಖಲೆಯನ್ನು ತೋರಿಸಬೇಕು.

**ಲಸಿಕೆಯ ದಾಖಲೆ:**

- ಕೆಲವೇ ಕೆಲವು ವಿನಾಯಿತಿಗಳನ್ನು ಹೊರತು ಪಡಿಸಿ, ವಿದೇಶಿ ಪ್ರಜೆಗಳಿಗೆ ವಿಮಾನ ಹತ್ತಲು ಲಸಿಕೆ ಪಡೆದ ದಾಖಲೆ ಅಗತ್ಯ ವಾಗಿರುತ್ತದೆ
- ಪ್ರಯಾಣಿಕರು ಅವರ ಲಸಿಕೆಯ ಸ್ಥಾನಮಾನ ತೋರಿಸಬೇಕು ಮತ್ತು ವಿಮಾನಯಾನ ಸಂಸ್ಥೆಗಳು:
    - ಲಸಿಕೆಯ ದಾಖಲೆಯಲ್ಲಿರುವ ಪ್ರಯಾಣಿಕರ ಹೆಸರು ಮತ್ತು ಜನ್ಮ ದಿನಾಂಕವನ್ನು ಹೊಂದಿಸಿ ನೋಡಿ ಅದೇ ವ್ಯಕ್ತಿ ಎಂದು ದೃಢಪಡಿಸಿಕೊಳ್ಳಬೇಕು.
    - ದಾಖಲೆಯನ್ನು ಲಸಿಕೆ ನೀಡಲಾದ ದೇಶದ ಅಧಿಕೃತ ಮೂಲ ನೀಡಿದೆ ಎಂದು ದೃಢಪಡಿಸಿಕೊಳ್ಳಬೇಕು (ಉದಾ: ಸಾರ್ವಜನಿಕ ಆರೋಗ್ಯ ಸಂಸ್ಥೆ, ಸರ್ಕಾರಿ ಸಂಸ್ಥೆ).
    - ಪ್ರಯಾಣಿಕರು ಸಿಡಿಸಿಯ ಪೂರ್ಣ ಲಸಿಕೆಯ ವ್ಯಾಖ್ಯಾನದ ಒಳಪಡುತ್ತಾರೆಯೇ ಎಂಬ ಮಾಹಿತಿಯನ್ನು ಪರಿಶೀಲಿಸಬೇಕು ಅಂದರೆ ಲಸಿಕೆಯ ಉತ್ಪನ್ನ, ಪಡೆಯಲಾದ ಲಸಿಕೆಯ ಡೋಸ್ ಗಳು, ನೀಡಲಾದ ದಿನಾಂಕ(ಗಳು), ತಾಣ(ಉದಾ: ಲಸಿಕೆಯ ಕ್ಲಿನಿಕ್, ಲಸಿಕೆಯ ಆರೋಗ್ಯಸೇವಾ ಸೌಲಭ್ಯ).
- ಬೈಡೆನ್ ಆಡಳಿತವು ವಿಮಾನಯಾನ ಸಂಸ್ಥೆಗಳೊಂದಿಗೆ ಬಹಳ ಹತ್ತಿರದಿಂದ ಕೆಲಸ ಮಾಡುತ್ತಿದ್ದು ಈ ಹೊಸ ಅಗತ್ಯ ಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದನ್ನು ದೃಢೀಕರಿಸುತ್ತದೆ.

**ಅನುಮೋದಿತ ಲಸಿಕೆಗಳು:**

- ಸಿಡಿಸಿಯು ಯುನೈಟೆಡ್ ಸ್ಟೇಟ್ಸ್ ಗೆ ಪ್ರಯಾಣಿಸುವ ಉದ್ದೇಶಗಳಿಗಾಗಿ ಅನುಮೋದಿತ ಲಸಿಕೆಗಳು ಎಫ್.ಡಿ.ಎ. ಅನುಮೋದಿತ ಮತ್ತು ವಿಶ್ವ ಆರೋಗ್ಯ ಸಂಸ್ಥೆಯ(ಡಬ್ಲ್ಯೂ.ಎಚ್.ಒ) ತುರ್ತು ಬಳಕೆ ಪಟ್ಟಿಯಲ್ಲಿರುವ (ಇಯುಎಲ್) ಲಸಿಕೆಗಳಾಗಿರಬೇಕು.
- ವ್ಯಕ್ತಿಗಳನ್ನು ಪೂರ್ಣ ಲಸಿಕೆ ಪಡೆದಿದ್ದಾರೆ ಎಂದು ಕೊನೆಯ ಡೋಸ್ ಪಡೆದ 2 ವಾರಗಳ ನಂತರ ಪರಿಗಣಿಸಲಾಗುತ್ತದೆ ಅವರು ಎಫ್.ಡಿ.ಎ ಅನುಮೋದಿತ/ಪ್ರಮಾಣೀಕೃತ ಅಥವಾ ಡಬ್ಲ್ಯೂ.ಎಚ್.ಒಇಯುಎಲ್ ಅನುಮೋದಿತ ಸಿಂಗಲ್-ಡೋಸ್ ಸರಣಿಯ(ಅಂದರೆ ಜಾನ್ಸನ್) ಒಂದು ಡೋಸ್ ಪಡೆದಿದ್ದಲ್ಲಿ, ಅಥವಾ ಎಫ್.ಡಿ.ಎ. ಅನುಮೋದಿತ/ಪ್ರಮಾಣೀಕೃತ ಅಥವಾ ಡಬ್ಲ್ಯೂ.ಎಚ್.ಒ ತುರ್ತು ಬಳಕೆಗೆ ಕೋವಿಡ್-19 ಎರಡು ಡೋಸ್ ಸರಣಿಯಲ್ಲಿ ಎರಡು ಡೋಸ್ ಗಳ ಸಂಯೋಜನೆ ಪಡೆದಿದ್ದಲ್ಲಿ(ಅಂದರೆ ಮಿಶ್ರಣ ಮತ್ತು ಹೊಂದಾಣಿಕೆ) ಪರಿಗಣಿಸಲಾಗುತ್ತದೆ.
- ಹೆಚ್ಚಿನ ವಿವರಗಳು ಸಿಡಿಸಿ ಅನುಬಂಧದಲ್ಲಿ ಲಭ್ಯವಿವೆ.

**ಪರೀಕ್ಷೆ ಹೆಚ್ಚಳ:**

- ಹಿಂದೆ, ಎಲ್ಲ ಪ್ರಯಾಣಿಕರೂ ಯುನೈಟೆಡ್ ಸ್ಟೇಟ್ಸ್ ಗೆ ಪ್ರಯಾಣಿಸಿದ ಮೂರು ದಿನಗಳ ಒಳಗೆ ನೆಗೆಟಿವ್ ವೈರಲ್ ಟೆಸ್ಟ್ ನೀಡಬೇಕಾಗಿತ್ತು.
- ನ್ಯೂಕ್ಲಿಯಿಕ್ ಆಸಿಡ್ ಆಂಪ್ಲಿಫಿಕೇಷನ್ ಟೆಸ್ಟ್ ಗಳಾದ(ಎನ್.ಎ.ಎ.ಟಿ.ಗಳು), ಪಿಸಿಆರ್ ಪರೀಕ್ಷೆ ಮತ್ತು ಆಂಟಿಜೆನ್ ಪರೀಕ್ಷೆಗಳು ಅರ್ಹವಾಗಿವೆ.
- ಸೆಪ್ಟೆಂಬರ್ ನಲ್ಲಿ ಪ್ರಕಟಿಸಲಾದಂತೆ ಹೊಸ ವ್ಯವಸ್ಥೆಯು ಆ ಅಗತ್ಯಗಳನ್ನು ಬಿಗಿಗೊಳಿಸಿದೆ, ಇದರಿಂದ ಲಸಿಕೆ ಪಡೆಯದ ಯು.ಎಸ್.ನಾಗರಿಕರು ಮತ್ತು ಎಲ್.ಪಿ.ಆರ್.ಗಳು ಪ್ರಯಾಣಿಸಿದ ಒಂದು ದಿನದಲ್ಲಿ ನೆಗೆಟಿವ್ ಟೆಸ್ಟ್ ನೀಡಬೇಕು.
- ಅಂದರೆ ಪೂರ್ಣ ಲಸಿಕೆ ಪಡೆದ ಯುನೈಟೆಡ್ ಸ್ಟೇಟ್ಸ್ ಗೆ ಪ್ರಯಾಣಿಸುವ ಎಲ್ಲ ಅಮೆರಿಕಾ ಪೌರರು ಮತ್ತು ಎಲ್.ಪಿ.ಆರ್.ಗಳು ಅವರ ಲಸಿಕೆಯ ಸ್ಥಾನಮಾನ ಕುರಿತಾದ ದಾಖಲೆಯನ್ನು ಅವರ ನೆಗೆಟಿವ್ ಟೆಸ್ಟ್ ಫಲಿತಾಂಶದೊಂದಿಗೆ ನೀಡಲು ಸಿದ್ಧವಾಗಿರಬೇಕು..
- ಪ್ರಸ್ತುತ ತಾವು ಪೂರ್ಣ ಲಸಿಕೆ ಪಡೆದಿದ್ದೇವೆ ಎಂದು ತೋರಿಸುವ ಅಮೆರಿಕನ್ನರಿಗೆ ಅದೇ ನಿಯಮ ಅನ್ವಯಿಸುತ್ತದೆ- ಅವರು ಪ್ರಯಾಣಿಸಿದ ಮೂರು ದಿನಗಳಲ್ಲಿ ನೆಗೆಟಿವ್ ಟೆಸ್ಟ್ ಫಲಿತಾಂಶ ದಾಖಲೆ ನೀಡಬೇಕು.

- ಪೂರ್ಣ ಲಸಿಕೆ ಪಡೆದಿರುವ ದಾಖಲೆ ನೀಡಲಾಗದವರು ಯುನೈಟೆಡ್ ಸ್ಟೇಟ್ಸ್ ಗೆ ಪ್ರಯಾಣಿಸುವ ಯಾರೇ ಆದರೂ ಅವರು ನಿರ್ಗಮನದ ಒಂದು ದಿನದಲ್ಲಿ ನೆಗೆಟಿವ್ ಟೆಸ್ಟ್ ದಾಖಲೆ ನೀಡಬೇಕು.

**ಮಕ್ಕಳಿಗೆ ಅಗತ್ಯಗಳು:**

- ವಿದೇಶಿ ಪ್ರಯಾಣಿಕರಲ್ಲಿ 18 ವರ್ಷದ ಒಳಗಿನ ಮಕ್ಕಳಿಗೆ ಲಸಿಕೆ ಪಡೆಯುವ ನಿಯಮದಿಂದ ವಿನಾಯತಿ ನೀಡಲಾಗಿದೆ, ಅದಕ್ಕೆ ಕೆಲ ಮಕ್ಕಳು ಲಸಿಕೆ ಪಡೆಯಲು ಅರ್ಹರಾಗಿಲ್ಲದಿರುವುದು, ಅರ್ಹತೆ ಇರುವ ಮಕ್ಕಳಿಗೆ ವಿಶ್ವದ ಹಲವೆಡೆ ಲಸಿಕೆಯ ಲಭ್ಯತೆಯಲ್ಲಿ ವ್ಯತ್ಯಾಸ ಇರುವುದು ಮುಖ್ಯ ಕಾರಣವಾಗಿದೆ.
- 2ರಿಂದ 17 ವರ್ಷಗಳ ನಡುವಿನ ಮಕ್ಕಳು ಹೊರಡುವ ಮುನ್ನ ಪರೀಕ್ಷೆ (ಪ್ರಿ-ಡಿಪಾರ್ಚರ್ ಟೆಸ್ಟ್) ಮಾಡಿಸಿಕೊಳ್ಳ ಬೇಕು.
- ಪೂರ್ಣ ಲಸಿಕೆ ಪಡೆದ ವಯಸ್ಕರೊಂದಿಗೆ ಲಸಿಕೆ ಪಡೆಯದ ಮಗು ಸಂಚರಿಸುತ್ತಿದ್ದಲ್ಲಿ ಮಗುವು ನಿರ್ಗಮನದ ಮೂರು ದಿನಗಳ ಮುನ್ನ ಪರೀಕ್ಷಿಸಬೇಕು(ಪೂರ್ಣ ಲಸಿಕೆ ಪಡೆದ ವಯಸ್ಕರ ಲಸಿಕೆ ಪಡೆದ ಅವಧಿಗೆ ಹೊಂದುವಂತೆ). ಲಸಿಕೆ ಪಡೆಯದ ಮಗುವು ವಿಮಾನದಲ್ಲಿ ಒಂಟಿಯಾಗಿ ಅಥವಾ ಲಸಿಕೆ ಪಡೆಯದ ವಯಸ್ಕರೊಂದಿಗೆ ಪ್ರಯಾಣಿಸುತ್ತಿದ್ದರೆ ಅವರು ನಿರ್ಗಮನದ ಒಂದು ದಿನದ ಒಳಗಡೆ ಪರೀಕ್ಷೆಗೆ ಒಳಪಡಬೇಕು.

**ಲಸಿಕೆಯ ಅಗತ್ಯದಿಂದ ಸೀಮಿತ ವಿನಾಯಿತಿಗಳು:**

- ವಿದೇಶಿ ಪ್ರಜೆಗಳಿಗೆ ಲಸಿಕೆಯ ಅಗತ್ಯದಲ್ಲಿ ಕೆಲವು ಸೀಮಿತ ವಿನಾಯಿತಿಗಳಿವೆ. ಇವುಗಳಲ್ಲಿ 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವರಿಗೆ ವಿನಾಯಿತಿ, ಕೆಲವು ಕೋವಿಡ್-19 ಲಸಿಕೆಯ ಕ್ಲಿನಿಕಲ್ ಟ್ರಯಲ್ ಗಳಲ್ಲಿ ಭಾಗವಹಿಸುವವರು, ಲಸಿಕೆಗಳಿಗೆ ವೈದ್ಯಕೀಯವಾಗಿ ಪ್ರತಿರೋಧ ಇರುವವರು, ತುರ್ತು ಅಥವಾ ಮಾನವೀಯ ಕಾರಣಗಳಿಗೆ ಸಂಚರಿಸುವವರು(ಅಮೇರಿಕ ಸರ್ಕಾರ ನೀಡಿದ ತುರ್ತು ಪ್ರಯಾಣದ ದೃಢೀಕರಣ ಪತ್ರದೊಂದಿಗೆ), ಕಡಿಮೆ ಲಸಿಕೆ ಲಭ್ಯತೆಯ ದೇಶಗಳಿಂದ ಪ್ರವಾಸಿಗರಲ್ಲದ ವಿಸಾಗಳಲ್ಲಿ ಸಂಚರಿಸುವವರು(ಸಿಡಿಸಿ ನಿರ್ಧರಿಸಿದಂತೆ), ಮತ್ತು ಇತರೆ ಅತ್ಯಂತ ಸೀಮಿತ ವಿಭಾಗಗಳು.
- ವಿನಾಯಿತಿ ಪಡೆದವರು ಸಾಮಾನ್ಯವಾಗಿ 60 ದಿನಗಳಿಗಿಂತ ಹೆಚ್ಚು ಕಾಲ ಇಲ್ಲಿ ಉಳಿಯಲು ಬಯಸಿದರೆ ಅವರು ಅಮೇರಿಕದಲ್ಲಿ ಲಸಿಕೆ ಪಡೆಯುವುದೂ ಒಳಗೊಂಡಂತೆ, ಬಹಳ ಸೀಮಿತ ವಿನಾಯಿತಿಗಳೊಂದಿಗೆ ಅನ್ವಯವಾಗುವ ಸಾರ್ವಜನಿಕ ಆರೋಗ್ಯದ ಅವಶ್ಯಕತೆಗಳನ್ನು ಅನುಸರಿಸುತ್ತಾರೆ ಎಂದು ದೃಢೀಕರಿಸುವ ಅಗತ್ಯವಿದೆ.

**ಸಂಪರ್ಕ ಪತ್ತೆ:**

- ಸಿಡಿಸಿ ಕಾಂಟ್ಯಾಕ್ಟ್ ಟ್ರೇಸಿಂಗ್ ಆರ್ಡರ್ ನೀಡಿದ್ದು ಅದರಲ್ಲಿ ಯುನೈಟೆಡ್ ಸ್ಟೇಟ್ಸ್ ಗೆ ಸಂಚರಿಸುವ ಎಲ್ಲ ವಿಮಾನಯಾನ ಸಂಸ್ಥೆಗಳು ಸಿಡಿಸಿಗೆ ಅಗತ್ಯವಾದಾಗ ಸಾರ್ವಜನಿಕ ಆರೋಗ್ಯ ಅಧಿಕಾರಿಗಳಿಗೆ ಸೋಂಕಿನ ಸಂಭವನೀಯತೆಯ ಮತ್ತು ಸೋಂಕಿನೊಂದಿಗೆ ಸಂಪರ್ಕಕ್ಕೆ ಬಂದ ಒಳಬರುವ ವೈಮಾನಿಕ ಪ್ರಯಾಣಿಕರ ಸಂಪರ್ಕ ಮಾಹಿತಿಯನ್ನು ಪ್ರಾಮಾಣಿಕವಾಗಿ ನೀಡಬೇಕು.
- ಇದು ಅತ್ಯಂತ ಪ್ರಮುಖ ಸಾರ್ವಜನಿಕ ಆರೋಗ್ಯ ಕ್ರಮವಾಗಿದ್ದು ಇದು ಕೋವಿಡ್-19 ಹೊಸ ವೇರಿಯೆಂಟ್ ಗಳ ಪರಿಚಯ, ವರ್ಗಾವಣೆ ಮತ್ತು ಹರಡುವುದನ್ನು ತಡೆಯುತ್ತದೆ ಅಲ್ಲದೆ ಇತರೆ ಸಾರ್ವಜನಿಕ ಆರೋಗ್ಯದ ಆತಂಕಗಳನ್ನು ಎದುರಿಸುವ ರೋಗತಡೆಯ ಸಾಧನವಾಗಿದೆ.

###